**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

**SC No. 41/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀಮತಿ ಅಕ್ಕವ್ವ** | **PW - 4** |
| ಗಂಡನ ಹೆಸರು | : | **ಪೂವಯ್ಯ** | **CW - 4** |
| ವಯಸ್ಸು | : | **80 ವರ್ಷ** | |
| ವೃತ್ತಿ | : | **ಮನೆ ಕೆಲಸ** | |
| ವಾಸ | : | **ಕುಂದಚೇರಿ ಗ್ರಾಮ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 14-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ಪ್ರಾಸಾ-1 ನನ್ನ ಗಂಡ, ಪ್ರಾಸಾ-2 ನನ್ನ ಮಗ, ಪ್ರಾಸಾ-3 ನನಗೆ ಸೊಸೆ ಆಗಬೇಕು. ಆರೋಪಿತನು ನನ್ನ ಮಗನಾಗಬೇಕು, ಮೃತ ನಂದೀಶನು ನನಗೆ ಮಗನಾಗಬೇಕು. ಮೃತ ನಂದೀಶ ಮತ್ತು ನಾವು ಒಂದೇ ಮನೆಯಲ್ಲಿ ವಾಸವಾಗಿದ್ದೆವು. ನಂದೀಶ್ ಮತ್ತು ಆತನ ಹೆಂಡತಿ ಸರಾಯಿ ಕುಡಿದುಕೊಂಡು ಬರುತ್ತಿದ್ದರು. ಅವರು ಮನೆಯಲ್ಲೆ ಇರುತ್ತಿದ್ದರು, ಅವರು ನನಗೆ ಯಾವುದೇ ತೊಂದರೆ ಮಾಡುತ್ತಿರಲಿಲ್ಲ.

2. ಸುಮಾರು 2 ವರ್ಷದ ಹಿಂದೆ ರಾತ್ರಿ 8.00 ಗಂಟೆಗೆ ನಂದೀಶನು ಬಿದ್ದಿದ್ದನು, ಅವನು ಏನಾಗಿ ಬಿದ್ದಿದ್ದನು ಗೊತ್ತಿಲ್ಲ. ಆತನ ತಲೆಗೆ ಪೆಟ್ಟಾಗಿತ್ತು, ಅವನ ತಲೆಗೆ ಹೇಗೆ ಪೆಟ್ಟಾಯಿತು ಗೊತ್ತಿಲ್ಲ. ಆರೋಪಿತನು ನಂದೀಶನಿಗೆ ಹಲ್ಲೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ನಂತರ ಸೋಮಣ್ಣ ನಂದೀಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ತಿ ವಿಚಾರದಲ್ಲಿ ಆರೋಪಿ ಮತ್ತು ನಂದೀಶನ ಮಧ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆಸ್ತಿ ವಿಚಾರದಲ್ಲಿ ಆರೋಪಿತನು ನಂದೀಶ್ ಈತನನ್ನು ಹಲ್ಲೆ ಮಾಡಿರುವುದಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ

ಕೊಟ್ಟಿರುವುದಿಲ್ಲ. ಸಾಕ್ಷಿ ಪಂಚನಾಮೆ ಮೇಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು **ನಿಪಿ-11** ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ-11(ಎ)** ಎಂದು, ಮತ್ತೊಂದು ಸಹಿಯನ್ನು **ನಿಪಿ-11(ಬಿ)** ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಫೊಟೋಗಳನ್ನು ನೋಡಿ ಗುರುತಿಸಿದ್ದು, ಫೊಟೋಗಳನ್ನು **ನಿಪಿ-12** ಮತ್ತು **ನಿಪಿ-13** ಎಂದು ಗುರುತಿಸಲಾಯಿತು. ಫೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ನಂದೀಶನಿಗೆ ಏನಾಗಿತ್ತು ಎಂದು ಹೇಳಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ಮೃತ ನಂದೀಶ ಹಾಗೂ ಆರೋಪಿ ಉತ್ತಪ್ಪ ಹಾಗೂ ನಮ್ಮ ನಡುವೆ ಆಸ್ತಿ ಪಾಲಿನ ವಿಚಾರದಲ್ಲಿ ಪ್ರತಿದಿನ ಗಲಾಟೆ ಆಗುತ್ತಿತ್ತು ಅದಕ್ಕೆ ಆರೋಪಿ ಮತ್ತು ನಂದೀಶರವರ ಮಧ್ಯೆ ವೈಮನಸ್ಸು ಎಂದು ಸೂಚಿಸುವುದು ಸರಿಯಲ್ಲ.

2. ದಿನಾಂಕ 25.11.2023 ರಂದು ಮೃತ ನಂದೀಶನು ಮನೆಗೆ ಬಂದು ಸಂಜೆ 7.30 ಗಂಟೆ ಸಮಯದಲ್ಲಿ ನನ್ನೊಂದಿಗೆ ಆಸ್ತಿ ಪಾಲಿನ ವಿಚಾರದಲ್ಲಿ ಜಗಳ ಮಾಡಿಕೊಂಡಿದ್ದನು ಎಂದು ಸೂಚಿಸುವುದು ಸರಿಯಲ್ಲ. ದಿನಾಂಕ 25.11.2023 ರಂದು ರಾತ್ರಿ 8.30 ಗಂಟೆಗೆ ಆರೋಪಿ ಉತ್ತಪ್ಪ ಮನೆಯ ಹೊರಗೆ ಬಂದು ನಂದೀಶನನ್ನು ಕರೆದು ನಿನಗೆ ಆಸ್ತಿಯಲ್ಲಿ ಪಾಲು ಬೇಕಾ

ಎಂದು ಅವಾಚ್ಯವಾಗಿ ಬೋಳಿ ಮಗನೆ ಎಂದು ಬೈದು ನಿನಗೆ ಗತಿ ಕಾಣಿಸುತ್ತೇನೆ ಎಂದು ಕೊಲೆ ಮಾಡುವ ಉದ್ದೇಶದಿಂದ ಮನೆಯ ಒಳಗೆ ಹೋಗಿ ಕತ್ತಿಯನ್ನು ತಂದು ನಂದೀಶನ ತಲೆಗೆ ಕಡಿದು ತೀವ್ರ ಸ್ವರೂಪದ ಗಾಯ ಮಾಡಿ ಕತ್ತಿಯನ್ನು ಅಲ್ಲೆ ಬಿಸಾಡಿ, ಪುನಃ ಕೋವಿಯನ್ನು ತಂದು ನಂದೀಶನಿಗೆ ಹೊಡೆಯಲು ಬಂದಾಗ ನನ್ನ ಗಂಡ, ಮೀನಾಕ್ಷಿ ಮತ್ತು ಸೋಮಣ್ಣ ಸೇರಿ ಆರೋಪಿಯಿಂದ ಕೋವಿಯನ್ನು ಕಸಿದುಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿತನು ಹಲ್ಲೆ ಮಾಡಿದ್ದರಿಂದ ನಂದೀಶನು ಗಾಯಗೊಂಡು ಮೃತ ಪಟ್ಟಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

3. ದಿನಾಂಕ 27.11.2023 ರಂದು ಮಧ್ಯಾಹ್ನ 12.51 ಗಂಟೆಗೆ ನನ್ನ ಮಗ ನಂದೀಶನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದನು ಎಂದು ಸೂಚಿಸುವುದು ಸರಿಯಲ್ಲ.

4. ದಿನಾಂಕ 28.11.2023 ರಂದು ಪೊಲೀಸರು ನಮ್ಮ ಮನೆಗೆ ಬಂದು ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ಪಂಚನಾಮೆ ಮಾಡಿ ಪಂಚನಾಮೆ ಸಮಯಕ್ಕೆ ಆರೋಪಿತನು ಹಾಜರುಪಡಿಸಿದ ಕತ್ತಿ ಮತ್ತು ಆತನ ಬಟ್ಟೆಗಳನ್ನು ಹಾಗೂ ನಾನು ಹಾಜರುಪಡಿಸಿದ ನಂದೀಶ್ ಧರಿಸಿದ್ದ ಚಡ್ಡಿ, ಬಂದೂಕು ವಿನಾಯಿತಿ ಪತ್ರ, ಇವುಗಳನ್ನು ವಶಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಆ ಸಮಯದಲ್ಲಿ ನಿಪಿ-12 ಮತ್ತು ನಿಪಿ-13 ರಂತೆ ಫೊಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ ................ ನೋಡಿದರೆ ಗುರುತಿಸುತ್ತೇನೆ” ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-14** ಎಂದು ಗುರುತಿಸಲಾಯಿತು. ಆರೋಪಿತನು ನನ್ನ ಮಗನಾಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.